

ಹೆಚ್ಚಿನ ಬೀದಿ ನಾಯಿಗಳು ಇವನನ್ನು ಕಂಡೊಡನೆ ಸಾಕುನಾಯಿಗಳಂತೆ ಬಾಲ ಆಡಿಸುತ್ತಾ ಬಳಿ ಬರುತ್ತವೆ. ಯಾರೂ ಪ್ರೀತಿಸದ ಅವುಗಳಿಗೆ ಗೀತಾ, ಸೀತಾ, ಸೋಮ ಮುಂತಾದ ನಾಮಕರಣವೂ ಅವನಿಂದಲೇ ಆಗುತ್ತದೆ. ಅಲ್ಲದೆ ಶಾಪಿನೆದುರು ರಸ್ತೆಯಲ್ಲಿ ವಾಹನಕ್ಕೆ ಸಿಕ್ಕು ಅರೆಜೀವವಾಗುವ, ಸಾಯುವ ಪ್ರಾಣಿಗಳ ಶುಶ್ರೂಷೆ, ಅಂತಿಮ ಸಂಸ್ಕಾರಗಳೂ ಬಾಬುವಿನಿಂದಲೇ ನೆರವೇರುತ್ತವೆ.

ಇಂತಿಪ್ಪ ಬಾಬುವಿನ ಶಾಪು ಒಂದು ರೀತಿ ಮಾರುಕಟ್ಟೆಯೂ ಹೌದು. ಬೆಳ್ಳಂಬೆಳಗ್ಗೆ ಎಮ್ಮೆಯಿಂದ ಒದೆಸಿಕೊಂಡು, ಡೊಕ್ಕೆ ಮುರಿಸಿಕೊಂಡ ರಾಗಣ್ಣ ತನ್ನ ಎಮ್ಮೆಗೊಂದು ಗಿರಾಕಿ ಬೇಕೆಂಬ ವಿಷಯವನ್ನು ಬಾಬುವಿಗೆ ಹೇಳಿಹೋಗುತ್ತಾನೆ. ತನ್ನ ಶಾಪಿನ ಪೌಡರ್, ಕ್ರೀಮುಗಳ ಜೊತೆಗೇ ಆ ವಿಷಯವನ್ನೂ ಜೋಪಾನವಾಗಿಟ್ಟುಕೊಳ್ಳುವ ಬಾಬು ಬಳಿಕ ಬಂದವರ ಪೈಕಿ ಸೂಕ್ತರಾದವರಿಗೆ ಆ ಸುದ್ದಿಯನ್ನು ರವಾನಿಸುತ್ತಾನೆ. ತದನಂತರದಲ್ಲಿ ಆ ಹೋಗಲಾಡಿ ಎಮ್ಮೆಯನ್ನು ಮಾರುವ, ಕೊಳ್ಳುವವರಿಬ್ಬರೂ ಬಾಬುವಿನ ಅಂಗಡಿಯಲ್ಲೇ ಸಂಧಿಸಿ, ಅವನ ರೇಟು ಆಕಾಶ, ಇವನ ಬೆಲೆ ಪಾತಾಳ ಎಂದಾದಾಗ ಬಾಬಣ್ಣನೇ ಮಧ್ಯ ಪ್ರವೇಶಿಸಿ ಇಬ್ಬರಿಗೂ ಸರಿ ಹೊಂದುವ ಬೆಲೆಯೊಂದನ್ನು ನಿಗದಿ ಪಡಿಸುತ್ತಾನೆ. ಹೀಗೆ ಯಾರ್ಯಾರೋ ಮಾರಬೇಕೆಂದಿರುವ ಸೈಕಲ್ಲು, ಎತ್ತಿನಗಾಡಿ, ತೋಟದ ಮೋಟಾರುಗಳಿಗೆ ಬಾಬಣ್ಣನೇ, ಒಂದು ಪೈಸೆ ಕಮೀಷನ್ ಇಲ್ಲದೆಯೇ ಮುಕ್ತಿ ಕೊಡಿಸುತ್ತಾನೆ. ವಸ್ತುಗಳು ಮಾತ್ರವಲ್ಲದೇ ಯಾವುದೋ ಊರಿನಲ್ಲಿರುವ, ಮದುವೆ ವಯಸ್ಸಿಗೆ ಬಂದ ಗಂಡು–ಹೆಣ್ಣುಗಳ ವಿವರಗಳೂ ಬಾಬಣ್ಣನ ಜೇಬಿನಲ್ಲೇ ಇರುತ್ತವೆ. ಕುರ್ಚಿಯ ಮೇಲೆ ಕುಳಿತ ಗಿರಾಕಿಗೆ ಶೇವಿಂಗ್ ಮಾಡುತ್ತಲೇ ‘ಕೋಟಾದಲ್ಲೊಂದ್ ಹೆಣ್ಣಿತ್ ಕಾಣ. ನಿನ್ ಚಂದಕ್ಕೆ ಅವಳೇ ಸರಿ. ನಿಂಗೆ ಹೇಳಿ ಮಾಡ್ಸಿದ್ ಜೋಡಿ’ ಎಂಬ ಸುದ್ದಿಯನ್ನೂ ಕ್ರೀಮಿಗೆ ಸೇರಿಸಿ ಒರೆಸಿಬಿಡುತ್ತಾನೆ. ತನ್ನ ಮಾತಿನ ಪ್ರಭಾವಕ್ಕೊಳಗಾದ ಅವನು, ಶೇವಿಂಗ್ ಆದ ತನ್ನ ಮೋರೆಯನ್ನು ಎರಡೆರೆಡು ಬಾರಿ ಕನ್ನಡಿಯಲ್ಲಿ ನೋಡಿಕೊಂಡಿದ್ದನ್ನು ಓರೆಗಣ್ಣಿನಲ್ಲೇ ಗಮನಿಸುವ ಬಾಬಣ್ಣ ‘ಫಿಕ್ಸಾಯ್ತು’ ಎಂದು ಒಳಗೊಳಗೇ ನಗುತ್ತಾನೆ. ಹೀಗೆ ಎಷ್ಟೋ ಮದುವೆಗಳಿಗೆ ಬಾಬುವಿನ ಕತ್ತರಿಯ ಕಚಕ್ ಕಚಕ್ ಸದ್ದೇ ನಾಂದಿಯಾಗುತ್ತದೆ. ಅವರಿಗೆ ಮದುವೆಯಾಗಿ, ಮುಂದೆ ಹುಟ್ಟಿದ ಮಕ್ಕಳೂ ಮತ್ತಿದೇ ಬಾಬುವಿನ ಶಾಪಿಗೇ ಕಟಿಂಗಿಗೆ ಬರುತ್ತಾರೆ. ಹೀಗೆ ತಾನು ಮಾಡಿದ ಮಂಗಳ ಕಾರ್ಯವೊಂದರ ಪ್ರತಿಫಲವನ್ನು ಸೋಕುವ ಮೂಲಕ ಬಾಬು ಕೃತಾರ್ಥನಾಗುತ್ತಾನೆ.

ಎದುರುಗಡೆ ರಸ್ತೆಯಲ್ಲಿ ಸಾಗುವ ಎಷ್ಟೋ ಸೈಕಲ್, ಬೈಕು, ರಿಕ್ಷಾಗಳು ಬಾಬುವಿಗೆ ‘ಓಯ್’ ಎಂದು ಕೈಮಾಡಿ ಮಾತಾಡಿಸಿಯೇ ಮುಂದೆ ಹೋಗುತ್ತವೆ. ಇನ್ನು, ಬಾಬು ಭಂಡಾರಿಯೊಂದಿಗಿನ ಜಗಳ, ವೈರತ್ವಗಳು ಯಾರಿಗೇ ಆದರೂ ದುಬಾರಿಯೇ ಆಗುತ್ತವೆ. ಅವನೊಟ್ಟಿಗೆ ಸಣ್ಣ ವಿಷಯಕ್ಕೆ ಜಗಳ ಕಾದು, ತನ್ನ ಕಟಿಂಗನ್ನು ತಾನೇ ಮಾಡಿಕೊಂಡ ಹುಲ್ಲೀಸರದ ಪರಮನ ಕೂದಲು ಅರ್ಧ ಇಲಿ ಹೆರೆದಂತೆ, ಇನ್ನರ್ಧ ಹಂದಿ ಹೂಟಿ ಮಾಡಿದಂತೆ ಕಾಣುತ್ತಿದೆ. ಇಂತಿಪ್ಪ ತನ್ನ ಕೂದಲನ್ನು ಸರಿ ಮಾಡಿಕೊಳ್ಳಲು ದಿನವಿಡೀ ಹೆಣಗಿದ ಅವನು, ಹೆಂಡತಿಯೂ ತನ್ನನ್ನು ನೋಡಿ ಮುಸಿ ಮುಸಿ ನಕ್ಕ ಮಾರನೇ ದಿನ ಮುಂಜಾನೆಯೇ ತಲೆ ಮೇಲೆ ಟವಲ್ ಹಾಕಿಕೊಂಡು, ಸೋಲೊಪ್ಪಿಕೊಂಡು ಬಾಬುವಿಗೆ ಶರಣಾಗತನಾಗಿದ್ದಾನೆ. ಒಳಗೇ ಹೆಮ್ಮೆಪಟ್ಟರೂ ಹೊರಗೆ ಒಂದೇ ಒಂದು ಕೊಂಕು ಮಾತಾಡದ ಬಾಬು, ಒಂದು ಸಾಲು ತೆಂಗಿನ ಮರದಂತೆ, ಇನ್ನೊಂದು ದಾಸವಾಳದ ಗಿಡದಂತೆ ಹೆಚ್ಚೂಕಡಿಮೆ ಆಗಿರುವ ಕೂದಲನ್ನು ಸಮ ಪ್ರಮಾಣದಲ್ಲಿ ಕತ್ತರಿಸುವ ಮೂಲಕ ಪರಮನನ್ನು ಆ ಕೋಡಗನ ವೇಷದಿಂದ ಪಾರುಮಾಡಿದ್ದಾನೆ.

ಯಾರಿಗೂ ತಲೆ ಬಾಗದ ಊರಿನ ರೌಡಿ ರುದ್ರನೂ ಬಾಬುವಿನೆದುರು ತಲೆ ಬಾಗುತ್ತಾನೆ. ಪೊಲೀಸರ ಮಾತನ್ನೂ ಕೇಳದ ಅವನು ಬಾಬು ಹೇಳಿದಾಗ ಮಾತ್ರ ತುಟಿ ಪಿಟಕ್ಕೆನ್ನದೆ, ಅವನು ಹೇಳಿದಂತೆ ತಲೆ ತಿರುಗಿಸುತ್ತಾ, ಆಜ್ಞೆಯನ್ನು ಶಿರಸಾ ಪಾಲಿಸುತ್ತಾನೆ. ಯಾರಿಂದಲೂ ಒಂದೇಟು ತಿನ್ನದ ಅವನ ಮುಖದ ಮೇಲೆ ಬಾಬು ಭಂಡಾರಿಯ ರೇಜರು ಮಾಡಿದ ಗಾಯದ ಗುರುತಿದೆ! ಮುಟ್ಟಿದವರ ಹುಟ್ಟಡಗಿಸುವ ರುದ್ರ ಬಾಬು ಗಾಯ ಮಾಡಿದರೂ ಸುಮ್ಮನೆದ್ದು ದುಡ್ಡು ಕೊಟ್ಟು ಹೋಗುತ್ತಾನೆ.

ಬಾಬು ಭಂಡಾರಿಯ ಶಾಪಿನಲ್ಲಿ ರಾಶಿ ಬೀಳುವ ಕೂದಲು ಏನಾಗುತ್ತದೆ ಎಂಬುದು ಊರಿನ ಮಕ್ಕಳ ನಡುವೆ ದಂತಕಥೆಯಾಗಿ ಓಡಾಡುತ್ತದೆ. ಅವುಗಳ ಪೈಕಿ, ಆ ಕೂದಲುಗಳಿಂದ ಟೋಫನ್ ಮಾಡುತ್ತಾರಂತೆ, ಅದನ್ನು ಹೀರೊ ಹೀರೋಯಿನ್‌ಗಳು ತೊಡುತ್ತಾರಂತೆ ಎಂಬುದು ಇಡೀ ಊರೇ ಅತ್ಯಂತ ಹೆಮ್ಮೆ ಪಡುವ, ವರ್ಣ ರಂಜಿತ ಗಾಳಿಸುದ್ದಿಯಾಗಿದೆ. ಅಪ್ಪನ ಜೊತೆ ಬೆಂಗಳೂರಿಗೆ ಹೋದ ಚಿಣ್ಣನೊಬ್ಬ ಅಲ್ಲಿ ಮಳಿಗೆಯೊಂದರ ಹೊರಗೆ ತಾನು ನೋಡಿದ ಕರಡಿ ವೇಷಧಾರಿಯು ತೊಟ್ಟ ಉಡುಪು ಮತ್ತದೇ ಬಾಬು ಭಂಡಾರಿಯ ಶಾಪಿನ ರಾಶಿಯಿಂದೆತ್ತಿದ ಕೂದಲಿನಿಂದಲೇ ಮಾಡಿದ್ದೆಂದು ನಿರ್ಧರಿಸಿದ್ದಾನೆ. ಈ ಮೂಲಕ ತನ್ನೂರಿನ ಕೀರ್ತಿ ಬೆಂಗಳೂರಿಗೂ ವ್ಯಾಪಿಸಿದೆಯೆನ್ನುವುದು ಅವನಲ್ಲಿ ಖುಷಿಯನ್ನು ಹುಟ್ಟುಹಾಕಿದೆ.

ಪಟ್ಟಣದಲ್ಲಿ ಎರಡು ಮಾಡರ್ನ್ ಸಲೂನ್‌ಗಳು ಶುರುವಾಗಿವೆಯೆಂಬ, ಅವುಗಳಲ್ಲಿ ಭರ್ಜರಿ ಶೈಲಿಯಲ್ಲಿ ಕಟಿಂಗ್ ಮಾಡುವ ನುರಿತ ಕ್ಷೌರಿಕರಿದ್ದಾರೆಂಬ ಸಂಗತಿ ಊರಿನಲ್ಲಿ ಹರಡಿದೆ. ಒಂದಿಬ್ಬರು ಪಡ್ಡೆಗಳು ಪಟ್ಟಣಕ್ಕೆ ಹೋಗಿ ಕ್ಷೌರ ಮಾಡಿಸಿಕೊಂಡಿದ್ದಲ್ಲದೆ, ಸ್ಟೈಲಾದ ತಮ್ಮ ಕೇಶವನ್ನು ಪ್ರದರ್ಶಿಸುತ್ತಾ ಊರ ತುಂಬಾ ಓಡಾಡುತ್ತಿದ್ದಾರೆ. ತನ್ನ ಅಂಗಡಿಯ ಮುಂದೇ ಹಾದುಹೋದ ಅವರನ್ನು ನೋಡಿದ ಬಾಬು ಭಂಡಾರಿ, ‘ಇದೇನು ನಾನು ಮಾಡದ್ದೇ? ನಾನು ಮಾಡಿ ಬಿಟ್ಟಿರೋದೇ ಎಲ್ಲಾ. ಅಷ್ಟಕ್ಕೂ ಅಲ್ಲಿ ಸೈಡಲ್ಲಿ ನೋಡು... ಹಂಗಾ ಕ್ರಾಪು ಮಾಡೋದು? ಒಂಚೂರೂ ಚೆನ್ನಾಗಿಲ್ಲ’ ಎಂದು ಗಟ್ಟಿಯಾಗಿ ನಕ್ಕಿದ್ದಾನೆ. ಅವನ ಸೂಪರ್ ಸಲೂನ್ ಶಾಪಿನಲ್ಲಿ, ಕುರ್ಚಿಯ ಮೇಲೆ, ಅವನ ಕೈಗೆ ತಲೆ ಕೊಟ್ಟು ಕುಳಿತಿರುವವರು ಬೇರೇನೂ ಹೇಳಲಾಗದೆ ಎಂದಿನಂತೆ ಹ್ಞೂಂ ಎಂದು ತಲೆಯಾಡಿಸಿದ್ದಾರೆ. ಫೋಟೊದಲ್ಲಿನ ಸಿನಿಮಾ ನಾಯಕರು ಅವನ ಮಾತಿಗೆ ಮನಸೋತವರಂತೆ, ಅವನಿಂದ ಮತ್ತೆ ಕಟಿಂಗ್ ಮಾಡಿಸಿಕೊಳ್ಳಲು ಕಾಯುತ್ತಿರುವಂತೆ ನಿಂತಿದ್ದಾರೆ. ಹೊರಗೆ ರಸ್ತೆಯಲ್ಲಿ ಹಾದು ಹೋದ ಯಾರಿಗೋ ‘ಹೋ!’ ಎಂದು ಪರಿಚಯದ ಸನ್ನೆಯಲ್ಲಿ ಕೈ ಬೀಸಿದ ಬಾಬು ಭಂಡಾರಿ ಚಕಚಕನೆ ಕೂದಲುಗಳ ನಡುವೆ ಕತ್ತರಿ, ಹಣಿಗೆಗಳ ಚಲಾಯಿಸುತ್ತಾ ತನ್ನ ಕಾಯಕ ಮುಂದುವರೆಸಿದ್ದಾನೆ.

ಪ್ರತಿಕ್ರಿಯಿಸಿ: feedback@sudha.co.in